# ವಿದ್ಯಾರ್ಥಿಗಳಿಂದ ಸ್ಮಾರ್ಟ್‌ಕ್ಲಾಸ್ ರೂಮ್ ಉದ್ಘಾಟನೆ



**ಉದಯಕಾಲ ನ್ಯೂಸ್**

**ಹಳಿಯಾಳ:** ಪಟ್ಟಣದ ಕೆಎಲ್‌ಎಸ್‌ವಿಡಿಐಟಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಅನುಕೂಲಕರವಾಗ ಲು ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗ ಹಾಗೂ ಸಿ ಎಸ್ ಇ (ಎಐ ಆ್ಯಂಡ್ ಎಂಎಲ್) ವಿಭಾಗದ ಸ್ಮಾರ್ಟ್ ಕ್ಲಾಸ್ ರೂಮ್‌ನ್ನು ಜುಲೈ 9ರಂದು ವಿದ್ಯಾರ್ಥಿಗಳಿಂದ ಉದ್ಘಾಟಿಸಲಾಯಿತು.

ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಡಿಜಿಟಲ್ ಮಾಧ್ಯಮದ ಮೂಲಕ ಬೋಧನಾ ದಕ್ಷತೆಯನ್ನು ಹೆಚ್ಚಿಸಲು ಈ ಬೋಧನಾ ಕೊಠಡಿಗಳು ಸಹಕಾರಿಯಾ ಗುತ್ತವೆ ಎಂದು ಹೇಳಿದರು.

ವಿದ್ಯಾರ್ಥಿಗಳಿಗೆ ವಿಷಯದ ಪರಿಕಲ್ಪನೆಯನ್ನು ಮನ ದಟ್ಟು ಮಾಡಲು ಆಧುನಿಕ ಸಲಕರಣೆ ಮತ್ತು ಅಂತ ರ್ಜಾಲ ಅಳವಡಿಸಿರುವ ಸ್ಮಾರ್ಟ್ ಟಿ. ವಿ. ಯನ್ನು ಈ ಬೋಧನಾ ಕೊಠಡಿಗಳು ಹೊಂದಿವೆ. ವಿದ್ಯಾರ್ಥಿಗಳಿಗೆ ಪಿಪಿಟಿ, ಯು ಟ್ಯೂಬ್, ಗೂಗಲ್ ಮೂಲಕ ತರಗತಿಯಲ್ಲಿ ವಿಷಯವನ್ನು ಬೋಧಿಸುವ ಸೌಲಭ್ಯ ಸ್ಮಾರ್ಟ್ ಕ್ಲಾಸ್ ರೂಮ್ ಹೊಂದಿದೆ.

ಎಲ್ಲ ವಿಭಾಗ ಮುಖ್ಯಸ್ಥರು ಮತ್ತು ಡೀನ್ ಉಪಸ್ಥಿತರಿದ್ದರು.

ಸಿಎಸ್‌ಇ (ಎಐ ಆ್ಯಂಡ್ ಎಂ ಎಲ್) ವಿಭಾಗ ಮುಖ್ಯಸ್ಥೆ ಡಾ. ಪೂರ್ಣಿಮಾ ರಾಯ್ಕರ್, ಎರಡು ವಿಭಾಗದ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ವಿಭಾಗದ ಮುಖ್ಯಸ್ಥ ಪ್ರೊ. ಅಲ್ಲಮಪ್ರಭು ಕೊಳಕಿ ಈ ಕಾರ್ಯಕ್ರಮವನ್ನು ಸಂಯೋಜಿಸಿದ್ದರು.

Hubballi Edition Edition
Jul 12, 2024 Page No. 8
Powered by: erelego.com